ತೆಗೆಯುತ್ತ ಅವಳನ್ನೇ ನೋಡುತ್ತ ನಿಂತುಬಿಟ್ಟ. ಸ್ವಲ್ಪ ಹೊತ್ತಾದ ಮೇಲೆ ದೇವೀರಿ ಮೈಮುರಿದು ಆಕಳಿಸಿ ಎದ್ದು ಕಳದಿಂದೀಚೆ ಬಂದು ಪೊದೆಯ ಮುಂದೆ ಕೂತಳು. ಗಿರಿಯ ಅವಳ ಕಡೆ ಹೆಜ್ಜೆಹಾಕಿದ. ತೇಲುಗಣ್ಣು ಮಾಲುಗಣ್ಣು ಮಾಡುತ್ತಿದ್ದ ಪಾಲಯ್ಯ ಗಿರಿಯನನ್ನು ತಡೆಯಬೇಕೆಂದುಕೊಂಡನಾದರೂ ಹಾಗೆ ತಡೆಯಲು ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಸುಮ್ಮನೆ ಬೆಪ್ಪಾಗಿ ನಿಂತು ತಲೆಯನ್ನು ಮೇಲೆ ಕೆಳಗೊಮ್ಮೆ ಅಡ್ಡಡ್ಡ ಒಮ್ಮೆ ಆಡಿಸುತ್ತ ಬೇಕು ಬೇಡ ಅನ್ನುವವನಂತೆ ನಿಂತ.

ಪೊದೆಯ ಕಡೆ ಬಂದ ಗಿರಿಯ ದೇವೀರಿಯ ಬಾಯಿಮುಚ್ಚಿ ಹೊತ್ತುಕೊಂಡು ಹೋಗಲು ಬಂದವನು ಅವಳ ತುರುಬನ್ನೇ ಬಾಯಿ ಅಂದುಕೊಂಡು ಜಾಕಿ ಹಿಡಿದ, ತಪ್ಪಿಸಿಕೊಂಡಿದ್ದ ದೇವೀರಿ 'ಬಠ್ರಪ್ಪೋ ಬಠ್ರಪ್ಪೋ, ಕಳ್ಳಾ ಕಳ್ಳಾ' ಅಂದು ಗಂಟಲು ಹರಿದು ಆಕಾಶ ಭೂಮಿ ಒಂದು ಮಾಡಿದಳು. ಕಳದಲ್ಲಿ ಮಲಗಿದ್ದ ಮುದುಕರು ಹೈದರು ಅನ್ನದೆ ಎಲ್ಲ ಎದ್ದು ಬಂದು ಗಿರಿಯ ಓಡಿದ ದಿಕ್ಕಿಗೆ ಓಡಿದರು. ಗಿರಿಯ ಕಾನೊಳಗೆ ನುಗ್ಗಿದ. ಅಲ್ಲೇ ಬೆಬಗರಿಯುತ್ತ ತಲೆಯಾಡಿಸುತ್ತ ನಿಂತಿದ್ದ ಪಾಲಯ್ಯ ಸಿಕ್ಕಿಕೊಂಡ. ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಪಾಲಯ್ಯನನ್ನು ಕೆಡವಿಕೊಂಡು ಹುಯ್ದರು. ತಲಾ ಹತ್ತತ್ತು ಏಟು ಹಾಕಲು ಪಾಲಯ್ಯನಿಗೆ ತಿಂದದ್ದೆಲ್ಲ ಹಿಂದೆ ಮುಂದೆ ಆಯಿತು. ಯಾವನೋ ಮರ್ಮಾಂಗಕ್ಕೆ ಮೂರು ಒದೆ ಒದ್ದ.

ರಾತ್ರೋ ರಾತ್ರಿಯೇ ಕೆರೆಯ ಸುತ್ತೆಲ್ಲ ಸುದ್ದಿಯಾಗಿ ಜನ ಲಾಟೀನು ಹಿಡಿದುಬಂದು ನೋಡಿದರು. ನೋಡಿದರೆ ದೊಡ್ಡತಮ್ಮಯ್ಯನವರ ಹಟ್ಟಿಯ ಪಾಲಯ್ಯ. ಗುಂಪಿನಲ್ಲಿ ಮಾತುಕತೆ ಎದ್ದುಕೊಂಡಿತು. ಕುಡಿದ ಗ್ಯಾನದಲ್ಲಿ ಪಾಲನು ಹಾಗೆ ಹೆಣ್ಣಿನ ಮೈಮೇಲೆ ಕೈಹಾಕಬಾರದಿತ್ತೆಂದರು. ದೇವರ ಸೇವೆಗೆ ಬಂದವನು ಈ ಕೆಲಸ ಮಾಡಬಾರದಿತ್ತೆಂದರು. ಕರಡಿ ಕಣಿವೆಯವರು ಪಾಲಯ್ಯ ಅಂಥವನಾಗಿರಲಿಲ್ಲವೆಂದು ವಾದಿಸಲು ಹೋದರು. ಜಿಂಕೆ ಮಾಳದವರು ಹಾಗಾದರೆ ದೇವೀರಿಯ ಸೆರಗು ಹಿಡಿದದ್ದು, ಅವಳು ಸದ್ದು ಮಾಡಿದ್ದು, ತಪ್ಪಿಸಿಕೊಂಡು ಓಡುವುದರಲ್ಲಿಯೇ ಸಿಕ್ಕಿಹಾಕಿಕೊಂಡದ್ದು ಎಲ್ಲವೂ ಸುಳ್ಳೋ, ಕಾರಯ್ಯಸ್ವಾಮಿಯ ಪಾದಗಟ್ಟೆಯ ಬಳಿ ನಿಂತು ಸತ್ಯವನ್ನು ಮುಚ್ಚಬಾರದೆಂದು ಅಬ್ಬರಿಸಿದರು. ಇಷ್ಟೆಲ್ಲ ಮಾತುಕತೆಯಾಗುವಲ್ಲಿ ಮರ್ಮಾಂಗಕ್ಕೆ ಏಟು ತಿಂದು ನರಳುತ್ತಿದ್ದ ಪಾಲಯ್ಯನ ಪ್ರಾಣ ಹೋಗಿಯೇ ಬಿಟ್ಟಿತ್ತು. ತಪ್ಪಿಸಿಕೊಂಡು ಓಡಿದ ಗಿರಿಯ ಕಾನೊಳಗೆ ಯಾವುದೋ ಮರ ಏರಿ ಕೂತಿದ್ದ. ಕೂತವನಿಗೆ ಜಿಂಕೆಮಾಳದ ಬಿಡಾರದಲ್ಲಿಯ ಗದ್ದಲ ಕೇಳಿ ಏನೋ ಆಗಬಾರದ್ದು ಆಗಿಹೋಗಿದೆ ಎನ್ನಿಸಿ ಮರ ಇಳಿದು ಬಿರಬಿರನೆ ಬಂದು ಗುಂಪು ಸೇರಿ ಬಿದ್ದಿದ್ದ ಗೆಣೆಕಾರನನ್ನು ನೋಡಿದ.

ಬೆಳಗಾಗಲು ಪಾಲಯ್ಯನ ಶವವು ದೊಡ್ಡತಮ್ಮಯ್ಯನವರ ಗಾಡಿಯಲ್ಲಿ ಊರಿಗೆ ಬಂತು. ಹೆಣದ ಹಿಂದೆಯೇ ಬಂದ ಗಿರಿಯ ತಾನೇ ನಿಂತು ಗೆಣೆಕಾರನ ಸಮಾಧಿ ಮಾಡಿದ. ಊರಿಗೆ ಹೋಗದೆ, ಐದು ದಿನವೂ ಕರಡಿ ಕಣಿವೆಯಲ್ಲೇ ಇದ್ದು ಮಾದೇವಿಗೆ ಉಣ್ಣಿಸಿ ತಿನ್ನಿಸಿ, ಐದನೆಯ ದಿನ ಪಾಲಯ್ಯನ ಸಮಾಧಿಗೆ ಹಾಲು ತುಪ್ಪ ಹುಯ್ದ. ಮಾದೇವಿಯಾದರೋ ತನ್ನ ಗಂಡ ಅಂಥವನಲ್ಲವೆಂದರೂ, ಇನ್ನೊಂದು ಹೆಣ್ಣಿನ ತುರುಬು ಹಿಡಿದು ಎಳೆಯುವಷ್ಟು ಧೈರ್ಯವಿಲ್ಲದವನೆಂದೂ, ಇದರಲ್ಲಿ ಏನೋ ಕರಾಮತ್ತು ನಡೆದಿದ್ದು ಯಾರಾದರೂ ಸತ್ಯಸಂಗತಿ ಹೇಳಬೇಕೆಂದೂ, ದೊಡ್ಡತಮ್ಮಯ್ಯನವರಿಂದ ಹಿಡಿದು ಜಾತ್ರೆಗೆ ಹೋಗಿದ್ದವರೆಲ್ಲರ ಕಾಲಿಗೂ ಬಿದ್ದು ಅಂಗಲಾಪು ಪಡುತ್ತಿದ್ದಳು. ಹಾಲು ತುಪ್ಪ ಹುಯ್ದ ಐದನೆಯ ದಿನ ಗಿರಿಯ